# 1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## ಎಸ್.ಸಿ. ನಂ. 89/2020

**ದಿನಾಂಕ.28.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರೆದು ಪಾಟೀ ಸವಾಲು ಸರ್ಕಾರಿ ಅಭಿಯೋಜಕರಿಂದಃ-**

4) ದಿ 01-02-2020 ರಂದು ನನ್ನನ್ನು ಹಾಗೂ ಚಾಸಾ-21 ರವರನ್ನು ಕ್ಯಾತ್ಸಂದ್ರ ಪೊಲೀಸ್ ಠಾಣೆಗೆ ಪೊಲೀಸರು ಕರೆಸಿದ್ದರು ಅಂದರೆ ಸರಿ. ಪೊಲೀಸ್ ಠಾಣೆಯಲ್ಲಿ ನ್ಯಾಯಾಲಯದ ಮುಂದೆ ಇರುವ ಆರೋಪಿ ಮತ್ತು ವಿಸಿ ಮೂಲಕ ಹಾಜರುಪಡಿಸಿರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನಂತರ ಪೊಲೀಸರು ಆರೋಪಿತರೊಂದಿಗೆ ನಮ್ಮನ್ನು ಕರೆದುಕೊಂಡು ಹೋಗಿದ್ದರು ಅಂದರೆ ಸರಿ. ನಂತರ ಆರೋಪಿತರನ್ನು ಕ್ಯಾತ್ಸಂದ್ರ ಎನ್ ಹೆಚ್ -48 ಸಮೀಪವಿರುವ ಟ್ರಕ್ ಟರ್ಮಿನಲ್ ಕಡೆಗೆ ಕರೆದುಕೊಂಡು ಹೋಗಿ ಜೀಪ್ ನಿಲ್ಲಿಸಿ ಜೀಪ್ ನಿಂದ ಇಳಿದು ಆರೋಪಿತರು ಮುಂದೆ ಮುಂದೆ ನಾವು ಹಿಂದೆ ಹಿಂಭಾಲಿಸಿ ಹೋದಾಗ ಒಂದು ಆಟೋ ರೀಕ್ಷಾವನ್ನು ತೋರಿಸಿದರು ಅಂದರೆ ಸರಿ. ನಂತರ ಆರೋಪಿತರು ಕೃತ್ಯಕ್ಕೆ ಆಟೋಟವನ್ನು ಬಳಸಿದ್ದಾರೆ ಎಂದು ಹೇಳಿದರು ಅಂದರೆ ಸರಿಯಲ್ಲ. ಸದರಿ ಆಟೋ ಸಂಖ್ಯೆ ಕೆಎ-06-ಡಿ-5187 ಆಗಿತ್ತು ಅಂದರೆ ನನಗೆ ಗೊತ್ತಿಲ್ಲ. ಆರೋಪಿತರು ಸದರಿ ಆಟೋವನ್ನು ಚಾಲಕನ ಸೀಟ್ ನ ಎಡಬದಿಯಲ್ಲಿ ರಕ್ತದ ಕಲೆಯಿರುವ ಗುರುತುಗಳನ್ನು ತೋರಿಸಿರುತ್ತಾರೆ

ಅಂದರೆ ಸರಿಯಲ್ಲ. ಪೊಲೀಸರು ಸದರಿ ಆಟೋದಿಂದ ರಕ್ತದ ಕಲೆಯಾಗಿರುವ ಕಲೆಗಳನ್ನು ಬ್ಲೇಡ್ ನಿಂದ ಕೆರೆದು ಒಂದು ಡಬ್ಬಿಯಲ್ಲಿ ಸಂಗ್ರಹಿಸಿರುತ್ತಾರೆ ಅಂದರೆ ಸರಿಯಲ್ಲ. ನಂತರ ಆರೋಪಿತರು ಕೊಲೆ ಮಾಡುವ ಸಮಯದಲ್ಲಿ ಧರಿಸಿದ್ದ ಬಟ್ಟೆಗಳನ್ನು ಹಾಗೂ ಮಚ್ಚನ್ನು ತೋರಿಸುತ್ತೇವೆಂದು ಹೇಳಿದ್ದರು ಅಂದರೆ ಸರಿಯಲ್ಲ. ನಂತರ ಆರೋಪಿತರು ಕೃತ್ಯಕ್ಕೆ ಬಳಸಿದ ಒಂದು ಕಬ್ಬಿಣದ ಮಚ್ಚು ಕಾಪಿ ಬಣ್ಣದ ಅರ್ಧ ತೋಳಿನ ರೆಡಿಮೆಡ್ ಶರಟ್ , ಆರೋಪಿ ಭರತನ ಒಂದು ಜೀನ್ಸ್ ಪ್ಯಾಂಟ್ , ಆರೋಪಿ ಕಾಂತರಾಜುವಿನ ಅರ್ಧ ತೋಳಿನ ಶರಟ್ , ರೆಡಿಮೆಡ್ ಬರ್ಮೋಡನಿಕ್ಕರ್ ನ್ನು ಆರೋಪಿತರು ಚರಂಡಿಯಿಂದ ತೆಗೆದು ಹಾಜರುಪಡಿಸಿರುತ್ತಾರೆ ಅಂದರೆ ಸರಿಯಲ್ಲ. ಅವುಗಳನ್ನು ಪೊಲೀಸರು ಪ್ರತ್ಯೇಕವಾಗಿ ಸೀಲ್ ಮಾಡಿ ಅಮಾನತ್ತುಪಡಿಸಿಕೊಂಡು ನಮ್ಮ ಸಮಕ್ಷಮ ಮಧ್ಯಾಹ್ನ 1.05 ನಿಮಿಷದಿಂದ 2.30 ರವರಿಗೆ ಅಮಾನತ್ತುಪಂಚನಾಮೆ ಮಾಡಿ ಸ್ಥಳದಲ್ಲಿಯೇ ನನ್ನ ಸಹಿ ಪಡೆದುಕೊಂಡಿರುತ್ತಾರೆ ಅಂದರೆ ಸರಿಯಲ್ಲ.

5) ಬಿಳಿ ಬಟ್ಟೆಯಲ್ಲಿ ಸೀಲ್ ಆಗಿರುವ ಒಂದು ವಸ್ತುಗಳನ್ನು ತೆಗೆದು ಸಾಕ್ಷಿದಾರರಿಗೆ ತೋರಿಸಲಾಗಿ ಸಾಕ್ಷಿದಾರರು ಸದರಿ ಮಚ್ಚನ್ನು ನೋಡಿ ಗುರುತಿಸಿದ್ದು, ಮಚ್ಚನ್ನು ಮುಮಾ-9 ಎಂದು ಗುರುತಿಸಲಾಯಿತು. ಕಾಪಿ ಬಣ್ಣದ ಅರ್ಧ ತೋಳಿನ ರೆಡಿಮೆಡ್ ಟೀ ಶರಟ್ ನ್ನು ಸಾಕ್ಷಿಗೆ ಸದರಿ ವಸ್ತುವನ್ನು ಗುರುತಿಸಿರುವುದಿಲ್ಲ. ಪಾಚಿ ಕಲರ್ ನ ಜೀನ್ಸ್ ಪ್ಯಾಂಟ್ ನ್ನು

ಸಾಕ್ಷಿದಾರರಿಗೆ ತೋರಿಸಲಾಗಿ ಸಾಕ್ಷಿದಾರರು ಗುರುತಿಸಿರುವುದಿಲ್ಲ . ಒಂದಲು ಡಿಸೆಂಪ್ ಬಣ್ಣದ ವಿ ನೆಕ್ ನ ಅರ್ಧ ತೋಳಿನ ಟೀ ಶರಟ್ ನ್ನು ಗುರುತಿಸಿರುವುದಿಲ್ಲ . ಒಂದು ರೆಡಿಮೆಡ್ ನೀಲಿ ಬಣ್ಣದ ಬರ್ಮೋಡ ನಿಕ್ಕರ್ ನ್ನು ಸಾಕ್ಷಿ ನೋಡಿ ಗುರುತಿಸಿರುವುದಿಲ್ಲ . ಸದರಿ ವಸ್ತುಗಳನ್ನು ನಮ್ಮಸಮಕ್ಷಮ ಅಮಾನತ್ತುಪಡಿಸಿಕೊಂಡಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಅಮಾನತ್ತುಪಡಿಸಿಕೊಂಡು ಬಹಳ ದಿನಗಳು ಆಗಿರುವುದರಿಂದ ಸದರಿ ವಸ್ತುಗಳನ್ನು ಈಗ ಗುರುತಿಸಲು ಆಗುತ್ತಿರುವುದಿಲ್ಲ.

**<u>ಪಾಟೀಸವಾಲು 1 ನೇ ಆರೋಪಿ ಪರ ಶ್ರೀ ಕೆ ಎಸ್ ಜೆ ವಕೀಲರಿಂದಃ</u>**-

6) ಕ್ಯಾತ್ಸಂದ್ರ ಪೊಲೀಸ್ ಠಾಣೆಗೆ ಯಾವ ದಿನ ಮತ್ತು ಎಷ್ಟು ಗಂಟೆಗೆ ಹೋಗಿದ್ದೆ ಎಂದು ಹೇಳಲು ಬರುವುದಿಲ್ಲ. ನಾನು ಬೇರೆ ಪ್ರಕರಣಗಳಲ್ಲಿ ಪೊಲೀಸರ ಸಾಕ್ಷಿಯಾಗಿ ನ್ಯಾಯಾಲಯದ ಮುಂದೆ ಸಾಕ್ಷಿ ನುಡಿದಿದ್ದೆ ಅಂದರೆ ಸರಿ. ಪೊಲೀಸರು ನನಗೆ ಠಾಣೆಗೆ ಹೋದ ನಂತರ ನೋಟೀಸ್ ನ್ನು ನೀಡಿರುತ್ತಾರೆ. ಆ ದಿನ ಠಾಣೆಯಲ್ಲಿ ಹಾಜರಿದ್ದ ಇಬ್ಬರು ಹುಡುಗರ ವಯಸ್ಸು ಮತ್ತು ಯಾವ ಬಣ್ಣದ ಬಟ್ಟೆ ಧರಿಸಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ಸ್ಥಳದಲ್ಲಿ ಬರವಣಿಗೆ ಮಾಡಿರುತ್ತಾರೆ. ಪಂಚನಾಮೆಯನ್ನು ಬರೆದ ಸ್ಥಳದಲ್ಲಿಯೇ ನಾನು ಸಹಿ ಮಾಡಿರುತ್ತೇನೆ. ಸಿದ್ಧಗಂಗಾ ಕ್ರಾಸ್ ಸ್ಥಳಕ್ಕೆ ಹೋದಾಗ ನನ್ನ ಸಹಿ ಪಡೆದಿರುವುದಿಲ್ಲ. ಬಿಳಿ ಬಟ್ಟೆಯಲ್ಲಿ ಸುತ್ತಿದ್ದ ವಸ್ತುಗಳು ಯಾವುದು ಎಂದು ನನಗೆ ಗೊತ್ತಿಲ್ಲ.

ಪೊಲೀಸರು ಅಂದು ಅಮಾನತ್ತುಪಡಿಸಿಕೊಂಡ ಮಚ್ಚು ಇದೇ ಎಂದು ನಾನು ಯಾವುದೇ ಗುರುತು ಇಟ್ಟುಕೊಂಡಿರುವುದಿಲ್ಲ. ಸಾಮಾನ್ಯವಾಗಿ ಎಲ್ಲಾ ಮನೆಗಳಲ್ಲಿ ಸದರಿ ಮಚ್ಚುನಂತಹದು ಸಿಗುತ್ತದೆ ಅಂದರೆ ಸರಿಯಲ್ಲ. ಪೊಲೀಸರು ಮೊಬೈಲ್ ನಲ್ಲಿ ಪೋಟೋ ತೆಗೆದುಕೂಂಡಿರುತ್ತಾರೆ. ನಾವು ಆ ದಿನ ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ ಮತ್ತು ಅಲ್ಲಿಂದ ನಮ್ಮನ್ನು ಟ್ರಕ್ ಟರ್ಮಿನಲ್ ಗೆ ಕರೆದುಕೊಂಡು ಹೋಗಿರುವುದಿಲ್ಲ ಅಂದರೆ ಸರಿಯಲ್ಲ. ಮಹಜರ್ ನಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ ಅಂದರೆ ಸರಿ . ನಾನು ಪಂಚನಾಮೆಯ ಸ್ಥಳದಲ್ಲಿ ಸಹಿ ಮಾಡಿರುವುದಿಲ್ಲ , ಠಾಣೆಯಲ್ಲಿ ಸಹಿ ಮಾಡಿದ್ದೇನೆ ಅಂದರೆ ಸರಿಯಲ್ಲ . ನನ್ನ ಜೊತೆಗೆ ಯಾರು ಯಾರು ಸಹಿ ಮಾಡಿದರು ಎಂದು ನನಗೆ ಗೊತ್ತಿಲ್ಲ. ಪೊಲೀಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

( 2 ನೇ ಆರೋಪಿಯ ವಿನಂತಿಯ ಮೇರೆಗೆ 1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಆಳವಡಿಸಿಕೊಳ್ಳಲಾಯಿತು. )

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.